## ಸೊಗಸಾದ ನಿರೂಪಣೆ

'ಸ್ಲಿಮ್ ಆಯಿತೆ ಚಳಿಗಾಲ...' ಸುಧಾ ಹೆಗಡೆ ಅವರ ಮುಖಪುಟ ಲೇಖನ (ಸುಧಾ, ಡಿ. 20) ಚೆನ್ನಾಗಿದೆ. ಪ್ರಸಕ್ತ ಹವಾಮಾನದ ಪರಿಸ್ಥಿತಿ ಬದಲಾವಣೆ, ಜಾಗತಿಕ ತಾಪಮಾನದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನಿರೂಪಣೆ ಶೈಲಿಯೂ ಚೆನ್ನಾಗಿದೆ.

—ಎಸ್.ವಿ. ಶಿವಕುಮಾರ್ ಬೆಂಗಳೂರು,
ಸುಲೋಚನಾ ವಾದಿರಾಜ್ ಹೊಳೆಹೊನ್ನೂರು,
ಮಹಾವೀರ ಕಾಸರ ಶಿವಮೊಗ್ಗ,
ಕೆ.ಪಿ. ರಾಮಗುಂಡಿ ಬೈಲಹೊಂಗಲ

## ಕಾಲ ಮಾಯ

ಉಣ್ಣೆ ಸ್ವೆಟರ್, ಟೋಪಿ, ಕೈಗವಸು ಕಾಲುಚೀಲ, ರಗ್... ಎಲ್ಲ ಬಳಸಿ ಚಳಿ ಚಳಿ ಎಂದು ಮುಲುಗುತ್ತಿದ್ದ ಕಾಲ ಮಾಯವಾಗಿದೆ. ಸರ್ವಕಾಲಕ್ಕೂ ಫ್ಯಾನ್ ಇಲ್ಲದೆ ಮಲಗಲಾಗದೆಂಬ ದುಃಸ್ಥಿತಿ. ಕೊನೆಗೆ ಸಸ್ಯವರ್ಗಕ್ಕೂ ಇದರ ಹೊಡೆತ ಬಿದ್ದಿದೆ ಎಂದು ತಿಳಿದಾಗ ದುಃಖವಾಯಿತು. ಇದಕ್ಕೆ ಹೊಣೆ ನಾವೇ ಅಲ್ಲವೇ? 'ಏನೆಂದು ನಾ ಹೇಳಲಿ ಮಾನವನಾಸೆಗೆ ಕೊನೆಯೆಲ್ಲಿ... 'ಹಾಡನ್ನು ನೆನಪಿಸಿತು.

—ಕೆ.ವಿ.ರಾಜಲಕ್ಷ್ಮಿ ಬೆಂಗಳೂರು
ಪಿ. ಗೋವಿಂದರಾಜ್ ಶಿವಮೊಗ್ಗ
ಎಂ.ಎಸ್. ಧರ್ಮೇಂಧ್ರ, ದೊಡ್ಡಮಗ್ಗೆ

## ಹುಳಿಯ ವ್ಯಾಮೋಹ

'ವಿಚಾರ ಲಹರಿ'ಯಲ್ಲಿ 'ಸನ್ಯಾಸಿಯೂ ಬೆಂಡೇಕಾಯಿಯ ಹುಳಿಯೂ' (ಅಮೃತಮತಿ) ಬರಹ ಅರ್ಥಪೂರ್ಣ. ಮಾಸ್ತಿಯವರ ಸಣ್ಣಕಥೆ, 'ಸನ್ಯಾಸ ಅಲ್ಲದ ಸನ್ಯಾಸ' ಆಧರಿಸಿ ಬೆಂಡೇಕಾಯಿ ಹುಳಿ ತಿನ್ನಲೂ ವಂಚಿತನಾಗಿ, ಆ ದುಗುಡದಲ್ಲಿ ಸನ್ಯಾಸ ಸ್ವೀಕಾರ ಮಾಡಿ ಮತ್ತೆ ಅದೇ ಸಂದರ್ಭ ಒದಗಿ ಬಂದಾಗ ಸಂಸಾರಸ್ಥನಾಗುವ ನರಸಿಂಹಯ್ಯ ಮೇಷ್ಟ್ರರ ಅಪರಿಪಕ್ವ ಸನ್ಯಾಸತ್ವದ ಬಗ್ಗೆ ಮನಮುಟ್ಟುವಂತೆ ನಿರೂಪಿಸಿದ್ದಾರೆ.

—ಸುಂದರ್, ಬೆಂಗಳೂರು

## ವರ್ಣಮಯ ಚಿಟ್ಟೆಗಳು

'ಹುಲಿ ಚಿಟ್ಟೆ ಫೈಟಿಂಗ್'! ಹ.ಸ. ಬ್ಯಾಕೋಡ ಅವರ ಚಿತ್ರಲೇಖನ ಅತ್ಯಂತ ಸೊಗಸಾಗಿ ಮೂಡಿ ಬಂದಿದೆ. ವರ್ಣಮಯ ಚಿಟ್ಟೆಗಳ ಚಿತ್ರಗಳಂತೂ ಅತ್ಯಂತ ಆಕರ್ಷಕವಾಗಿದ್ದು, ಕಣ್ಮನ ಸೆಳೆಯುವಂತಿವೆ. ಅವುಗಳ ಜೀವನಕ್ರಮವನ್ನೂ ಲೇಖಕರು ಚೆನ್ನಾಗಿ ವಿವರಿಸಿದ್ದಾರೆ.

—ಬಿ. ಮನೋಹರ, ಚಳ್ಳಕೆರೆ, ರತ್ನಾಕರ
ಹೆಗಡೆಕಟ್ಟೆ, ಮೂಡಬಿದಿರೆ

## ಗುಡ್‌ಲಕ್!

ಕ್ರೀಡಾ ಲೇಖನ 'ಭರವಸೆಯ ಹುಡುಗರು' (ಕೆ. ಓಂಕಾರಮೂರ್ತಿ) ಓದಿ ಖುಷಿಯಾಯಿತು. ಲೇಖನದಲ್ಲಿ ಹೇಳಿರುವ ಕರ್ನಾಟಕ ಟೀಮಿನ ದೇವದತ್ತ ಪಡಿಕ್ಕಲ್ ಹಾಗೂ ಡಿ. ನಿಶ್ಚಲ್ ಅವರು ಯುವ ಪ್ರತಿಭಾವಂತ ಆಟಗಾರರೆಂದು ತಿಳಿಯಿತು. ಇವರ ಸಾಧನೆ ಓದಿದಾಗ ಇವರು ಮುಂದೆ ಕರ್ನಾಟಕದ ಹೆಮ್ಮೆಯ ಆಟಗಾರರಾಗುವುದರಲ್ಲಿ ಸಂದೇಹವಿಲ್ಲ. ಇವರಿಬ್ಬರಿಗೂ ಗುಡ್‌ಲಕ್!

— ನಾರಾಯಣ ಯಾಜಿ ಶಿರಾಲಿ




## ರಸ್ತೆಗಳು ಸುವ್ಯವಸ್ಥಿತವಾಗಿರಲಿ

'ನಿಮ್ಮೊಡನೆ'ಯಲ್ಲಿ 'ಸಾವಿನ ಗುಂಡಿಗಳಿಗೆ ಎಂದು ಮುಕ್ತಿ?' (ರಘುನಾಥ ಚ.ಹ.) ಬರಹ ಚೆನ್ನಾಗಿದೆ. ಸಾರ್ವಜನಿಕರಿಗೆ ವಿಶೇಷವಾಗಿ ವಾಹನ ಸವಾರ, ಪ್ರಯಾಣಿಕರಿಗೆ ಆಗುವ ತೀವ್ರ ಅಪಾಯ ಹಾಗೂ ಹಾನಿ, ಆತಂಕಗಳ ನಿವಾರಣೆಯ ಹಿತದೃಷ್ಟಿಯಿಂದ ಸಂಬಂಧಿಸಿದವರು ತಮ್ಮ ನೈತಿಕ ಹೊಣೆಗಾರಿಕೆಯನ್ನು ಸೂಕ್ತ ಸಮರ್ಥ ರೀತಿ ನಿರ್ವಹಿಸಲು, ನಿಭಾಯಿಸಲು ಸಹಕಾರಿಯಾದ ಮಾಹಿತಿ ಮಾರ್ಗದರ್ಶಿ ಸೂತ್ರಗಳನ್ನು ಲೇಖನ ಒಳಗೊಂಡಿತ್ತು.

—ನಾ.ಕು. ಗಣೇಶ್ ಬೆಂಗಳೂರು
ರಾಜಶೇಖರ ಹಾದಿಮನಿ, ಧಾರವಾಡ

## ಕಳಪೆ ಕಾಮಗಾರಿ

ರಾಜ್ಯದ ನಾನಾ ಮಹಾನಗರಗಳಲ್ಲಿನ ಮುಖ್ಯ ರಸ್ತೆಗಳಲ್ಲೆಲ್ಲ ಗುಂಡಿಗಳದ್ದೇ ಕಾರುಬಾರು. ಇನ್ನು ಚಿಕ್ಕಪುಟ್ಟ ಊರುಗಳಲ್ಲಿನ ರಸ್ತೆ ಗಳಂತೂ ಸಾಕ್ಷಾತ್ ನರಕಸದೃಶವೇ ಸರಿ. ನಾಯಿ ಕೊಡೆಯಂತೆ ಏಳುತ್ತಿರುವ ಈ ಗುಂಡಿ ಮುಚ್ಚಲೆಂದೇ ಪ್ರತೀವರ್ಷ ಕೋಟಿಗಟ್ಟಲೆ ವ್ಯಯಿಸುವ ಹಣ ಅದಾವ ಗುಂಡಿಗೆ ಬೀಳುತ್ತಿದೆ ಎನ್ನುವುದು ಎಲ್ಲರನ್ನು ಕಾಡುವ ಯಕ್ಷಪ್ರಶ್ನೆಯಾಗಿದೆ.

—ಅರವಿಂದ. ಜಿ.ಜೋಷಿ ಮೈಸೂರು

## ಕಥೆ ಚೆನ್ನಾಗಿದೆ

ಕಥೆ 'ಒಂದಲ್ಲಾ ಎರಡಲ್ಲಾ' (ಡಿ. ಸತ್ಯಪ್ರಕಾಶ್) ಚೆನ್ನಾಗಿದೆ. ಸಮಾಜದ ಅಂಕುಡೊಂಕನ್ನು ನಿರೂಪಿಸುವಲ್ಲಿ ಕಥೆಗಾರರು ತಮ್ಮ ಜಾಣ್ಮೆ ತೋರಿದ್ದು ಶ್ಲಾಘನೀಯ.

—ಎನ್.ಎಸ್. ಆನಂದ್ ಬೆಂಗಳೂರು

## ವಿಡಂಬನಾತ್ಮಕ

ಪುಟ್ಟ ಪುಟ್ಟ ಕಥೆಗಳು ಇಂದಿನ ನಮ್ಮ ಜೀವನಶೈಲಿಗೆ ಕನ್ನಡಿಯಂತಿದೆ ಎನ್ನಬಹುದು. ಮಕ್ಕಳನ್ನು ತುಂಬಿಕೊಂಡು ಅಡ್ಡಾದಿಡ್ಡಿಯಾಗಿ ಓಡಾಡುವ ವಾಹನ, ಮಕ್ಕಳು ವೃದ್ಧಾಶ್ರಮಕ್ಕೆ ಕೈಲಾದಷ್ಟು ದೇಣಿಗೆ ನೀಡುತ್ತಿದ್ದಾರೆ, ಕೋಟ್ಯಂತರ ವಿಷಯಗಳನ್ನು ತಮ್ಮೊಳಗೆ ಇಟ್ಟುಕೊಂಡು ಜನರನ್ನು ಒಂಟಿಯಾಗಿಸುತ್ತಿರುವ ಪುಟ್ಟ ಪರದೆಯ ಮರಿಮಕ್ಕಳು, ರಸ್ತೆಗೆರಡು ಗುಡಿಗಳು, ದೇವರೇ ತಪಸ್ಸಿಗೆ ಕುಳಿತದ್ದು... ಎಲ್ಲವೂ ವಿಡಂಬನಾತ್ಮಕವಾಗಿದೆ.

—ವೀಣಾ ಜೋಶಿ, ಬಾರ್ಕೂರು

## ಕಣ್ಣು ತೆರೆಸಿದೆ

ಫಿಟ್‌ನೆಸ್ ಅಂಕಣದಲ್ಲಿ 'ಚುರುಕು ದೃಷ್ಟಿಗೆ ಸೊಪ್ಪು ಸೇವಿಸಿ' (ಡಾ. ಶಶಿಕಲಾ ಪ್ರಕಾಶ್) ಲೇಖನ ಕಣ್ಣುಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಅನುಸರಿಸಬೇಕಾದ ಎಚ್ಚರಿಕೆಯ ಬಗ್ಗೆ ಕಣ್ಣು ತೆರೆಸಿದೆ.

—ವಿ. ಹೇಮಂತಕುಮಾರ ಬೆಂಗಳೂರು

## ಭೂತಾನ್ ಪ್ರವಾಸ

ಪ್ರವಾಸ ಲೇಖನ 'ಭೂತಾನ್– ಸಮಾಧಾನಿಗಳ ನಾಡು' (ಎಸ್.ನಟರಾಜ್ ಬೂದಾಳು) ಚೆನ್ನಾಗಿದೆ. ಭೂತಾನಿನಾದ್ಯಂತ ಸಂಚರಿಸಿದ ನನಗೆ ಗೋಚರವಾದ ಸತ್ಯವೆಂದರೆ, ಒಂದು ಗಂಡು ಸಂತಾನಕ್ಕೆ ಎರಡು ಹೆಣ್ಣು ಸಂತಾನಗಳಿರುವುದರಿಂದ ಓರ್ವ ಪುರುಷನಿಗೆ ಅಧಿಕೃತವಾಗಿ ಒಂದು ಹೆಂಡತಿ, ಅನಧಿಕೃತವಾಗಿ ಎರಡು, ಕೆಲವೊಮ್ಮೆ ಮೂವರು ಹೆಂಡಿರುಗಳಿರುವುದು ವಿಪರ್ಯಾಸ. ಆ ಸೋಮಾರಿ ಗಂಡಂದಿರು ಸಾರಾಯಿ ಕುಡಿದು ನಿಶ್ಚಿಂತರಾಗಿದ್ದರೆ, ಹೆಂಡತಿಯರು ದುಡಿದು ತಂದು ಸಾಕುತ್ತಿರುವ ದೃಶ್ಯ ಮನೋವೇದಕ.

—ಕೋಟೇಶ್ವರ ಸೂರ್ಯನಾರಾಯಣ ರಾವ್,
ಬೆಂಗಳೂರು

## ಕಲ್ಲಿನಲ್ಲಿ ಕಲೆ

ಕಾಮಧೇನು' ಬರಹ 'ಕಲ್ಲರಳಿ ಕಲೆಯಾಗಿ' (ಬಳಕೂರು ವಿ.ಎಸ್. ನಾಯಕ್) ಲೇಖನ ಓದಿ ಖುಷಿಯಾಯಿತು. ಕುಂದಾಪುರದ ಸುಧಾ ಶಾನುಭೋಗ್ ಅವರ ಕೈಚಳಕದಿಂದ ಕಲ್ಲಿನಲ್ಲಿ ಅರಳಿದ ಕಲೆಯ ಚಿತ್ರಗಳೂ ಆಕರ್ಷಕವಾಗಿವೆ.

—ಟಿ.ಎಂ. ಮಾನಪ್ಪ ಗೂಪಾಳ, ಶಿವಮೊಗ್ಗ

## ಪ್ರವಾಸಿ ತಾಣವಾಗಲಿ

'ಝಾನ್ಸಿರಾಣಿಯ ಮಣ್ಣಿನಲ್ಲಿ...' (ಟಿ. ಎಸ್. ಗೋಪಾಲ್) ಲೇಖನ ಚೆನ್ನಾಗಿದೆ. ಅವ್ಯವಸ್ಥೆಯಲ್ಲಿರುವ ಝಾನ್ಸಿ ರಾಣಿಯ ಬುಂದೇಲರ ಕೋಟೆಗೆ ಹೆಚ್ಚಿನ ಮಹತ್ವ ಸಿಕ್ಕಿ ಒಂದು ಪ್ರವಾಸಿ ತಾಣವಾಗಲಿ.

—ಕೊಹಿಮ ಬಸರಕೋಡು, ಮಹಾವೀರ
ಉಪಾಧ್ಯ ಬೆಡಕಿಹಾಳ